ಸೀಮೆ ಎಣ್ಣೆಯ ಬೇಡಿಕೆ ಪ್ರಮಾಣ

೪೦೭. **ಶ್ರೀ ಜಿ. ರಾಜೂಗೌಡ** (ಹನೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಕ್ಕೆ ಒಂದು ತಿಂಗಳಿನ ಸೀಮೆಎಣ್ಣೆಯ ಬೇಡಿಕೆ ಪ್ರಮಾಣ ಎಷ್ಟು ?

ಆ) ಯಾವ ಯಾವ ಏಜೆನ್ಸಿ ಮುಖಾಂತರ ಎಷ್ಟೆಷ್ಟು ಸೀಮೆಎಣ್ಣೆ ಸರಬರಾಜು ಮಾಡಲಾಗುತ್ತಿದೆ ?

ಇ) ಗ್ರಾಮಾಂತರ ಬೇಡಿಕೆಯನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆಯೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ನಮ್ಮ ರಾಜ್ಯಕ್ಕೆ ೪೬,೫೦೦ ಕೆ. ಎಲ್. ಸೀಮೆಎಣ್ಣೆ ಬೇಕಾಗುತ್ತದೆ,

ಆ) ೧) ಇಂಡಿಯನ್ ಆಯಿಲ್ ಕಾರ್ಪೊರೇಷನ್ ೨೬,೧೭೦

೨) ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ೪,೯೫೫

೩) ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ೯೩೪೪

೪) ಇಂಡೋ ಬರ್ಮಾ ಪೆಟ್ರೋಲಿಯಂ ಆಯಿಲ್ ಕಂಪೆನಿಗಳ ಮೂಲಕ ೬೬೬

ಒಟ್ಟು ೪೧,೭೪೦ ಕೆ. ಎಲ್.

ಕೇಂದ್ರ ಸರ್ಕಾರ ಮೇಲ್ಕಂಡಂತೆ ಸೀಮೆಎಣ್ಣೆಯನ್ನು ಕರ್ನಾಟಕ ರಾಜ್ಯಕ್ಕೆ ಸರಬರಾಜು ಮಾಡಲಾಗುತ್ತಿದೆ.

ಇ) ಸಮರ್ಪಕವಾಗಿ ಪೂರೈಸಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಕ್ಕೆ ಒಂದು ತಿಂಗಳಿಗೆ ಬೇಕಾಗಿರತಕ್ಕ ಸೀಮೆಎಣ್ಣೆ ೪೬,೫೦೦ ಕೆ. ಎಲ್. ಆಗಿದ್ದು ಈಗ ಸರಬರಾಜು ಆಗುತ್ತಾ ಇರುವುದು ೪೧,೭೪೦ ಕೆ.ಎಲ್ ಗಳು. ಇದನ್ನು ತಾವು ಸಮರ್ಪಕ ಎಂದು ಹೀಗೆ ಹೇಳುತ್ತೀರಿ ? ಇವತ್ತು ಗ್ರಾಹಕರಿಗೆ ಸಮರ್ಪಕವಾಗಿ ಎಣ್ಣೆ ಪೂರೈಕೆಯಾಗಿಲ್ಲ ಈ ಒಂದು ಕೊರತೆಯ ಹಿನ್ನೆಲೆಯಲ್ಲಿ ತಾವು ಕೇಂದ್ರ ಸರ್ಕಾರಕ್ಕೆ ಹೆಚ್ಚು ಸರಬರಾಜಿಗೆ ಒತ್ತಾಯವನ್ನು ತಂದಿಲ್ಲವೇ ? ಇವತ್ತಿನ ದಿವಸ ರಾಜ್ಯಕ್ಕೆ ಬೇಕಾಗತಕ್ಕ ಸೀಮೆಎಣ್ಣೆಯನ್ನು ಪಡೆಯುವುದರಲ್ಲಿ ತಾವು ವಿಫಲರಾಗಿದ್ದೀರಿ ಎನ್ನುವುದು ಈ ಅಂಕಿಸಂಖ್ಯೆಗಳಿಂದಲೇ ಗೊತ್ತಾಗುತ್ತದೆಯಲ್ಲವೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೇ ಸೀಮೆಎಣ್ಣೆ ವಿಚಾರದಲ್ಲಿ ಕೇಂದ್ರ ಸರ್ಕಾರ ಮೂರು ಸೀಸನ್ ಮಾಡಿದೆ. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಗಾಲ ಎಂದು. ಮಳೆಗಾಲ ಜುಲೈನಿಂದ ಆಕ್ಟೋಬರ್ ತಿಂಗಳವರೆಗೆ, ಚಳಿಗಾಲ ನವೆಂಬರ್‌ನಿಂದ ಫೆಬ್ರುವರಿ ತಿಂಗಳವರೆಗೆ. ಬೇಸಿಗೆಗಾಲ ಮಾರ್ಚಿಯಿಂದ ಜೂನ್ ತಿಂಗಳವರೆಗೆ. ಈ ಪ್ರಕಾರ ಸೀಮೆಎಣ್ಣೆಯನ್ನು ಕೇಂದ್ರಸರ್ಕಾರದವರು ಕೊಡುತ್ತಿದ್ದಾರೆ. ಚಳಿಗಾಲದಲ್ಲಿ ಹೆಚ್ಚು ಸೀಮೆಎಣ್ಣೆಯನ್ನು ಕೊಡುತ್ತಿದ್ದಾರೆ. ಈ ಸಾರಿ ಬೇಸಿಗೆಗಾಲದಲ್ಲಿ ನಾನು ಈಗಾಗಲೇ ಉತ್ತರದಲ್ಲಿ ಹೇಳಿದಂತೆ ಕೊಡುತ್ತಿದ್ದಾರೆ. ಆದರೆ ಕೆಲವೊಂದು ಕಡೆ ಸೀಮೆಎಣ್ಣೆ ಕಡಿಮೆ ಬೀಳುತ್ತದೆನ್ನುವ ವರದಿ ಬಂದಾಗ ಕೇಂದ್ರ ಸರ್ಕಾರದವರು ೮ ಮೆಟ್ರಿಕ್‌ಟನ್ ಅಂದರೆ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಕಿಲೋಲೀಟರ್ ಸೀಮೆಎಣ್ಣೆ ಒದಗಿಸಲಿಕ್ಕೆ ಒಪ್ಪಿದ್ದಾರೆ. ಈ ಪ್ರಕಾರ ಮೈಸೂರು ಜಿಲ್ಲೆಗೆ ೨೦೦ ಕಿಲೋಲೀಟರ್. ಬೆಳಗಾಂ ಜಿಲ್ಲೆಗೆ ೨೦೦ ಕಿಲೋಲೀಟರ್ ಮತ್ತು ಮಂಡ್ಯ ಜಿಲ್ಲೆಗೆ ೨೦೦ ಕಿಲೋಲೀಟರ್ ಬೇಕೆಂದು ಕೇಳಿದ್ದಾರೆ ಅದನ್ನು ನಾವು ಒದಗಿಸುತ್ತಿದ್ದೇವೆ. ಅದಕ್ಕಿಂತ ಹೆಚ್ಚು ಬೇಕೆಂದರೆ ಅದನ್ನು ಕೊಡುತ್ತೇವೆ. ಗ್ರಾಹಕರು ಸೀಮೆಎಣ್ಣೆಯನ್ನು ತೆಗೆದುಕೊಳ್ಳದೆ ಅದನ್ನು ಬೇರೆಯವರು ಏನಾದರೂ ದುರುಪಯೋಗ ಮಾಡಿಕೊಳ್ಳುದು ಕಂಡುಬಂದರೆ ಅದನ್ನು ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇನೆ.